ಬಿದ್ದಿರುವ ಹಳೆ ಶ್ಯಾಲೆಯಲ್ಲಿರುವ ಹೆಣ ತಿಮ್ಮನ ಊಹೆಯನ್ನ ದಿಢೀರ್ ಬದಲಾಯಿಸಿತು. ಅಲ್ಲಿ ಸತ್ತಿರುವುದು ಹಾಸಿಗೆ ಹಿಡಿದಿದ್ದ ದೊಡ್ಡಪ್ಪನಾಗಿರದೆ ವಯಸ್ಸಾಗಿದ್ದರೂ ಗಟ್ಟಿ ಮುಟ್ಟಾಗಿ ಇದ್ದ ಪುಟ್ನರ್ಸ ದೊಡವ್ವಳಾಗಿದ್ದಳು.

ತಿಮ್ಮ, 'ಅಯ್ಯೊ ಶಿವ್ನೆ ದೊಡವ್ಗೇನಾತು, ಕಲ್ಲಿದ್ದಂಗಿದ್ಲು' ಎಂದುಕೊಂಡು ಮೂಲೆ ಮಂಚದಲ್ಲಿ ಉಸ್ರುಯ್ಕಂತಿದ್ದ ದೊಡ್ಡಪ್ಪುನ್ನ ನೋಡಿದ. ಹೆಣದ ಸುತ್ತ ಆಕ್ರಂದನ ಮುಗಿಲು ಮುಟ್ಟಿತ್ತು. ಬಹುಶಃ ಎಂದೋ ಸಾಯ್ಬೇಕಾಗಿದ್ದ ಕರಿದೊಡಪ್ಪ ಸತ್ತಿದ್ರೆ ಜನ ಇಷ್ಟು ರೋದಿಸ್ತಿರ್ಲಿಲ್ವೇನೊ... ಅಲೆ ಕಾಯ್ಲೆ ಕಸಾಲೆ ಎಂದು ಜನಗುಳ್ಳ ಶ್ಯಾನೆ ರೋಸಿದ್ದ. ಆದ್ರೆ, ಇನ್ನು ತಿನ್ಕಂಡು ಉಣ್ಕಂಡು ತಿರ್ಗಾಡ್ಕೆಂಡಿದ್ದ ಪುಟ್ನರ್ಸಿ ಸತ್ತಿದ್ದು ಜನರ ರೋದನಕ್ಕೆ ಕಾರಣವಾಗಿತ್ತು. 'ನೆನ್ನೆ ಸಾಯಿಂಕಾಲ್ದಗಿನ್ನ ನೋಡ್ದೆ, ಹೊರ್ಲಾರ್ದಂತ ಹೊರೆ ಹುಲ್ಲೊತ್ಕಂಡು ಬತ್ತಿದ್ಲು' ಎಂದು ಒಬ್ಬನೆಂದರೆ ಇನ್ನೊಬ್ಬಳು, 'ಯಾಟೆ ಎಲ್ಲೊ ಕಾಣ್ತೆಲ್ಲ ಎಂದು ಬೆಳಗ್ಗಿನ್ನ ಬಾಯಿಗೆ ಬಂದಂಗೆ ಉಗಿತಿದ್ಲು' ಎನ್ನುತ್ತಿದ್ದಳು... ಒಬ್ಬೊಬ್ಬರೂ ಅವರವರಿಗೆ ದಕ್ಕಿದಂತೆ ಮೂಗಿಗೆ ಸೆರಗ ತುದಿ ಕೊಟ್ಟುಕೊಂಡು ಪುಟ್ನರ್ಸಿಯನ್ನು ಕೊಂಡಾಡುತ್ತಿದ್ದರು.

ದೊಡವ್ವನ ಇಕ್ಕುವ, ಕೊಡುವ ಗುಣ ನೆನೆದ ತಿಮ್ಮನ ಕಣ್ಣಂಚುಗಳೂ ತೇವವಾದವು. ಹೆಂಡ್ರು ಶಂಕ್ರಿ ಕಡಿಕೆ ನೋಡಲಾಗಿ ಅವ್ಳಂತು ಪುಟ್ನರ್ಸಿಯ ಹಿರಿ ಕಿರಿ ಸೊಸೆಯರ ಜೊತೆ ಸೇರಿಕೊಂಡು ಯಣೆನ ಮೇಲೆಲ್ಲ ಬಿದ್ದು ಒದ್ದಾಡುತ್ತಿದ್ದಳು. ಸತ್ತು ಬಿದ್ದಿರುವ ಪುಟ್ನರ್ಸಿಯ ಗಲ್ಲ ಹಿಡಿದು ಅಲ್ಲಾಡಿಸಿ ಅಳುವುದು, ಹಣೆ ಸವರುತ್ತ ಅಳುವುದು ಇತ್ಯಾದಿ ಮಾಡುತ್ತಿದ್ದಳು.

ಗುಂಪಿನಿಂದ ಬಿಡಿಸಿಕೊಂಡು ಆಚೆ ಬಂದ ತಿಮ್ಮ, ದೂರದಲ್ಲಿ ನಿಂತು ವಲ್ಲಿ ಕೊಟ್ಟುಕೊಂಡು ಗುಳುಗುಳನೆ ರೋದಿಸುತ್ತಿದ್ದ ದೊಡವ್ವನ ಗಂಡು ಮಕ್ಕಳ ಹೆಗಲ ಮೇಲೆ ಕೈಯಿಟ್ಟು ಸಮಾಧಾನಿಸಿದ.

ಗುಂಪಿನಲ್ಲಿದ್ದ ಯಾರೊ ಹಿರಿಯ, 'ಹ್ವಾ ಆಗಿದ್ದಾಗೋತು, ಅವ್ಳ ಋಣ ಅಷ್ಟೆಯ ಇದ್ದಿತ್ತು, ಬರರ್ಗೆ ದೂರ್ದ ಊರ್ಗೆಲ್ಲ ಫೋನ್ ಮಾಡಿ ಸುದ್ದಿ ತಿಳುಸ್ರಿ' ಎಂದ. ಇದಕ್ಕೆ ದನಿಗೂಡಿಸಿದ ಇನ್ನೊಂದು ದನಿ, 'ದೊಡವ್ನ ಹೆಣ್ಣುಮಕ್ಳಿಗೆ ಮುಂದಗೆ ಹೇಳ್ರಪ್ಪ' ಎಂದಿತು. ಈ ಎರಡೂ ಮಾತುಗಳು ನೇರವಾಗಿ ತಿಮ್ಮನನ್ನು ಉದ್ದೇಶಿಸಿಯೇ ಆಡಿದಂತಿತ್ತು. ಪುಟ್ನರ್ಸಿಗೆ ಎಲ್ಡು ಗಂಡು ಎಲ್ಡು ಹೆಣ್ಣು. ಹೆಣ್ಮಕ್ಳುಗುಳ್ನ ಹಿರಿಯೂರ್ ಕಡಿಕೆ ಕೊಟ್ಟು ಮಾಡಿತ್ತು. ಅವರಿಗೆ ಸುದ್ದಿ ತಿಳಿಸುವುದು ಸವಾಲಿನ ಕೆಲಸವೇ ಆಗಿತ್ತು. ಎಷ್ಟೆ ಆಗ್ಲಿ ಹೆತ್ತ ತಾಯಿ ಸತ್ತ ಸುದ್ದಿ ಅಲ್ವೆ!

ತಿಮ್ಮ ಕಣ್ಣು ಮೂಗು ವರಿಸ್ಕೆಂಡು ಆ ಕಡೆ ಮರ್ದಡಿಕೆ ಫೋನ್ ಹಿಡ್ಕಂಡೋಗಿ, 'ಅವ್ವಂಗೆ ಹುಷಾರಿಲ್ಲ ಬೇಗ ಬರ್ರಿ, ತಡ ಮಾಡ್ಬೇಡ್ರಿ' ಎಂದು ಅರ್ಥ ಗೊತ್ತು ಪಡಿಸಿದಂತೆಯೂ ಗೊತ್ತುಪಡಿಸದಂತೆಯೂ ಸುದ್ದಿ ಮುಟ್ಟಿಸಿ ನಿರಾಳನಾದ. ದೊಡವ್ವನ ಸ್ವಂತ ಮಕ್ಕಿಗೆ ಸುದ್ದಿ ಮುಟ್ಟಿಸಿದ ಸಮಾಧಾನದ ಬೆನ್ನಲ್ಲೆ ತಿಮ್ಮನ ಮನಸ್ಸು ಅದೆಷ್ಟೋ ಹಗುರಾದಂತಾಗಿ ಇಂದಿನ ಇನ್ನೊಂದು ಮುಖ್ಯ ಸಂಗತಿಯ ಕಡೆಗೆ ಹೊರಳಿತು. ಅಚಾನಕ್ ನೆನಪಾದವನಂತೆ ಬಾಗಿಲು ನೂಕಿಕೊಂಡು ಒಳಬಂದ. ಕೋಣೆಯೊಳಗೆ ಸಂದಿಗೆ ತಳ್ಳಿ ಹೋಗಿದ್ದ ಮಾಂಸ, ಚಾಕು–ಚೂರಿಗಳನ್ನ ಗಮನಿಸಿದ. ಅದು ಹೇಗೆ ನೂಕಿ ಹೋಗಿದ್ದನೋ ಹಾಗೆ ಇದ್ದುದನ್ನು ಕಂಡು ಮನಸ್ಸು ಪೆಚ್ಚೆನಿಸಿತು.

ಇಂದಿನ ಅದರ ಪಾಡು ನೆನೆದು ಕಳವಳಗೊಂಡ. ಹಿಂದೆ ಹೀಗೆ ಒಮ್ಮೆ ಯಾರೋ ಹತ್ತಿರದವರು ಸತ್ತಿದ್ದಾಗ, ಮಾಡಿದ ಕೋಳಿ ಸಾರನ್ನೆ ನಾಯಿ ಪಾಡು ಮಾಡಿದ್ದಳು ಶಂಕ್ರಿ. ಕೋಳಿ ಸಾರಾದ್ರು ಇಂದಲ್ಲ ನಾಳೆ ಸಿಕ್ಕೆ ಸಿಗುತ್ತೆ. ಆದ್ರೆ ಈ ಅಪರೂಪದ ಪದಾರ್ಥ ಮತ್ತೆ ಸಿಗದುಂಟೆ! ಹಾಗಂತ ಇನ್ನೂ ಒಲೆ ಬಿಸಿ ಕಾಣದೆ ಇರುವ ಈ ಮಾಂಸವನ್ನ ಸೂತ್ಕ ಬಂದಿರ ಮನೆಲಿ ಬೇಯ್ಸಿಕೆಂಡು ಕೂತ್ಕಣಕಾಗುತ್ತ. ಹೀಗೆ ತಿಮ್ಮನ ಮನಸ್ಸು ಅಯೋಮಯವಾಗಿ ಅಪರೂಪದ ಪದಾರ್ಥ ಹೀಗೆ ಅನಾಥವಾಗುವುದನ್ನ